# REPORT ON LEGAL AWARENESS PROGRAME IN MAYAKINDA VILLAGE 19/08/2023

The R L Law College, Davanagere NSS Unit in association with District Legal Services Authority, Davanagere arranged "Legal Awareness Programe" to create awareness to the public in Mayakonda Village on 19/08/2023. Hon'ble Mahavir M. Karennanavar, Member Secretary, DLSA, Davangere, was the resource person. Smt. B U Geeta, Member, District Consumer Redressal Forum, Davanagere, Sri. L H Arun Kumar, Precident, Davanagere Advocate Bar were the chief guest for the programe. The programme was presided by the Principal Dr. G.S. Yatheesh. More than 150 students had taken the part in that programe.






<u>INAUGURATION BY DIGNITARIES</u>






**NEWS PAPER CUTTING**



ಮಾಯಕೊಂಡದ ಕೆಪಿಎಸ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮವನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರಣ್ಣವರ ಉದ್ಘಾಟಿಸಿದರು

# ಕಾನೂನಿನಡಿ ಎಲ್ಲರೂ ಸಮಾನ: ನ್ಯಾ. ಮಹಾವೀರ ಎಂ. ಕರಣ್ಣವರ

ಪ್ರಜಾವಾಣಿ ವಾರ್ತೆ

ಮಾಯಕೊಂಡ: ನಮ್ಮ ಸಂವಿಧಾನವು ದೇಶದ ಪ್ರತಿ ಪ್ರಜೆಗೂ ಕಾನೂನು ಹಾಗೂ ನ್ಯಾಯವನ್ನು ಸಮಾನವಾಗಿ ನೀಡಿದೆ. ಕಾನೂನಿನ ಅರಿವು ಹೊಂದುವ ಮೂಲಕ ನಮ್ಮ ಹಕ್ಕು ಚಲಾಯಿಸಲು ಮುಂದಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರಣ್ಣವರ ಕರೆ ಕೊಟ್ಟರು.

ಇಲ್ಲಿನ ಕೆಪಿಎಸ್ ಶಾಲೆಯಲ್ಲಿ ದಾವಣಗೆರೆಯ ಆರ್‌ಎಲ್ ಕಾನೂನು ಕಾಲೇಜು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮಾಯಕೊಂಡ ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಿವೆ. ವಿವಿಧ ಕಾರಣಗಳಿಂದ ಬಹುತೇಕ ಅಪರಾಧಗಳು ದೂರು ದಾಖಲಿಸದೆ ಹಾಗೆಯೇ ಮುಚ್ಚಿ ಹೋಗುತ್ತವೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಪೋಕ್ಸೊ ಪ್ರಕರಣಗಳಲ್ಲಿ ಮಗುವಿನ ಹೆಸರು ಮತ್ತು ವಿಳಾಸ ಗೋಪ್ಯವಾಗಿಡಲಾಗುತ್ತದೆ. ಕಾನೂನು ಸೇವಾ ಪ್ರಾಧಿಕಾರದಿಂದ ಮಹಿಳೆ, ಮಕ್ಕಳು, ಎಸ್‌ಸಿ, ಎಸ್ಟಿ ಹಾಗೂ ವಾರ್ಷಿಕ ₹3 ಲಕ್ಷದೊಳಗೆ ಆದಾಯ ಹೊಂದಿರುವವರಿಗೆ ಕಾನೂನಿನ ಉಚಿತ ಸೇವೆ ದೊರೆಯುತ್ತಿದೆ. ಇದರ ಸದ್ಬಳಕೆ ಮಾಡಿಕೊಳ್ಳಬೇಕು’ ಎಂದರು.

‘ಎಲ್ಲರಿಗೂ ಕಾನೂನಿನ ಅರಿವು ಅಗತ್ಯ. ನಮ್ಮ ನೆಲದ ಕಾನೂನು ಪಾಲಿಸುವ ಮೂಲಕ ಗೌರವಿಸಬೇಕಿದೆ’ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್ ತಿಳಿಸಿದರು.

ಇಂದಿಗೂ ಬಾಲ್ಯ ವಿವಾಹಗಳು ನಡೆಯುತ್ತಿದ್ದು, ಇದರ ವಿರುದ್ಧ ವಿದ್ಯಾರ್ಥಿ ದಿಸೆಯಲ್ಲಿಯೇ ಪ್ರತಿರೋಧಿಸಬೇಕು ಎಂದು ಹಿರಿಯ ನ್ಯಾಯವಾದಿ ವೈ. ಮಂಜಪ್ಪ ಕಾಕನೂರು ಕರೆ ನೀಡಿದರು.

ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗದ ಬಿ.ಯು. ಗೀತಾ, ಕಾನೂನು ಕಾಲೇಜು ಪ್ರಾಂಶುಪಾಲ ಜಿ.ಎಸ್. ಯತೀಶ್, ಪ್ಯಾನೆಲ್ ಅಡ್ವೊಕೇಟ್ ತಂಜುಮ್ ಕೌಸರ್, ಗ್ರಾ.ಪಂ.ಅಧ್ಯಕ್ಷೆ ಶಿವಮ್ಮಮಲ್ಲಿಕಾರ್ಜುನ, ಗ್ರಾ.ಪಂ. ಸದಸ್ಯರಾದ ಗಾಳೇರ ನಾಗಪ್ಪ, ಬಸವರಾಜಪ್ಪ, ಪುಷ್ಪಾ, ಪಿಎಸ್‌ಐ ಅಜಯ್, ಸಹಾಯಕ ಪ್ರಾಧ್ಯಾಪಕರ ವಿದ್ಯಾಧರ ವೇದವರ್ಮ, ರೈತ ಮುಖಂಡ ಬೀರಪ್ಪ, ಕೆಪಿಎಸ್ ಪ್ರಾಂಶುಪಾಲ ಬಸವರಾಜಪ್ಪ, ಶಿಕ್ಷಕರಾದ ನಾಗರಾಜಪ್ಪ, ರವಿಕುಮಾರ್ ಇದ್ದರು.